## 21

# "ನಾನು ತಂದೆಯೂ ಒಂದಾಗಿದ್ದೇವೆ"

## (10:22-42)

ದೊಡ್ಡ ಅಲೆಕ್ಸಾಂಡರನು ತನ್ನ ಅಲ್ಪವಾದ ಆದರೆ ಗಮನಾರ್ಹವಾದ ಜೀವನದ ಸಮಯದಲ್ಲಿ ತಿಳಿದಿದ್ದ ಜಗತ್ತಿನ ಹೆಚ್ಚಾದ ಭಾಗವನ್ನು ಜಯಿಸಿದನು. ಕ್ರಿ.ಪೂ. 323ರಲ್ಲಿ ತನ್ನ ಮೂವತ್ಮೂರನೆಯ ವರ್ಷದಲ್ಲಿ ಮರಣಹೊಂದಿದಾಗ, ಅವನು ತನ್ನ ಸಾಮ್ರಾಜ್ಯವನ್ನು ತನ್ನ ನಂಬಿಗಸ್ತ ಸೇನಾಪತಿಗಳ ಕೈಗಳಲ್ಲಿ ಬಿಟ್ಟು ಹೋದನು. ಅವರಲ್ಲಿ ಒಬ್ಬನಾದ, ಸೆಲ್ಯೂಕಸ್‌ನು ಸಿರಿಯಾದ ಅಧಿಪತಿಯಾದನು ಮತ್ತು ಸೆಲ್ಯುಸಿದ್ ರಾಜವಂಶವನ್ನು ಸ್ಥಾಪಿಸಿದನು. ಅನೇಕ ವರ್ಷಗಳ ನಂತರ, ಅವನ ವಂಶಜರಲ್ಲಿ ಒಬ್ಬನು, ಅಂತಿಯೋಕಸ್ ಎಪಿಫಾನೆಸನು ಅಧಿಕಾರಕ್ಕೆ ಬಂದನು ಮತ್ತು ಐಗುಪ್ತದ ಮೇಲೆ ದಾಳಿ ಮಾಡುವದರಿಂದ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು. ಐಗುಪ್ತದ ಮೇಲೆ ತನ್ನ ಯಶಸ್ವೀ ದೊರೆತನವನ್ನು ಹಿಂಬಾಲಿಸಿ, ಕ್ರಿ.ಪೂ. 169ರಲ್ಲಿ ಯೆರೂಸಲೇಮಿಗೆ ವಿರುದ್ಧವಾಗಿ ಯುದ್ಧಮಾಡಲು ಹೊರಟನು. ಅವನು ಅಲ್ಲಿಗೆ ತಲುಪಿದ ನಂತರ, ಅವನು ಪರಿಶುದ್ಧಾಲಯವನ್ನು ಪ್ರವೇಶಿಸಿ ಬೆಲೆಯುಳ್ಳ ಪ್ರತಿಯೊಂದನ್ನು ತೆಗೆದುಕೊಂಡನು.[1]

ಹೀಗಿದ್ದರೂ, ಯೆಹೂದ್ಯರ ದೇವಾಲಯವನ್ನು ಸೂರೆಮಾಡಿದ್ದು ಅಂತಿಯೋಕಸ್ ಎಪಿಫಾನೆಸನಿಗೆ ತೃಪ್ತಿಕೊಡಲಿಲ್ಲ. ತನ್ನ ಸಾಮ್ರಾಜ್ಯದಲ್ಲಿರುವ ಎಲ್ಲರೂ ತಮ್ಮ ಭಿನ್ನವಾದ ಪದ್ಧತಿಗಳನ್ನೂ ಧರ್ಮಗಳನ್ನೂ ಬಿಟ್ಟು ಬಿಟ್ಟು, ಗ್ರೀಕ್ ಭಾಷೆಯನ್ನಾಡುವ, ಗ್ರೀಕ್ ಪದ್ಧತಿಗಳನ್ನು ಆಚರಿಸುವ, ಮತ್ತು ಗ್ರೀಕ್ ಧರ್ಮವನ್ನು ರೂಢಿಸುವ ಐಕ್ಯ ಜನಾಂಗವಾಗಬೇಕೆಂದು ಒತ್ತಾಯಿಸಲು ಮುಂದಾದನು.[2] ಇದನ್ನು ಸಾಧಿಸಲು ಯೆಹೂದ್ಯರಿಗೆ, ತಮ್ಮ ದೇವರಿಗೆ ಯಜ್ಞ ಅರ್ಪಿಸುವದನ್ನು, ತಮ್ಮ ಮಕ್ಕಳಿಗೆ ಸುನ್ನತಿ ಮಾಡಿಸುವದನ್ನು, ಮತ್ತು ಸಬ್ಬತ್ತನ್ನು ಆಚರಿಸುವದನ್ನು ನಿಲ್ಲಿಸಬೇಕೆಂದು ಆಜ್ಞಾಪಿಸಿದನು. ದೇವಾಲಯದಲ್ಲಿಯ ಯಜ್ಞವೇದಿಯು, ಅದರ ಮೇಲೆ ಹಂದಿಯನ್ನು (ಯೆಹೂದ್ಯರು ಎಂದೂ ದೇವರಿಗೆ ಯಜ್ಞವನ್ನಾಗಿ ಅರ್ಪಿಸದೇ ಇರುವ ಅಶುದ್ಧ ಪ್ರಾಣಿಯನ್ನು) ಯಜ್ಞವಾಗಿ ಅರ್ಪಿಸುವದರಿಂದ ಹೊಲೆಮಾಡಲ್ಪಟ್ಟಿತು. ಮತ್ತು ಕಂಡು ಹಿಡಿಯಲ್ಪಟ್ಟ ಧರ್ಮಶಾಸ್ತ್ರದ ಪುಸ್ತಕಗಳು ಸುಡಲ್ಪಟ್ಟವು.[3] ಅದು ನಿಶ್ಚಯವಾಗಿಯೂ ಇಸ್ರಾಯೇಲ್ಯರ ಚರಿತ್ರೆಯಲ್ಲಿ ಅತೀ ಅಂಧಕಾರದ ತಾಸುಗಳಲ್ಲಿ ಒಂದಾಗಿತ್ತು:

> ಆಜ್ಞೆಯ ಪ್ರಕಾರವಾಗಿ, ತಮ್ಮ ಮಕ್ಕಳಿಗೆ ಸುನ್ನತಿ ಮಾಡಿಸಿದ ಮಹಿಳೆಯರನ್ನು ಮತ್ತು ಅವರ ಕುಟುಂಬಗಳನ್ನು ಮತ್ತು ಅವರಿಗೆ ಸುನ್ನತಿ ಮಾಡಿದವರನ್ನು ಕೊಂದು ಹಾಕಿದರು; ಚಿಕ್ಕ ಮಕ್ಕಳನ್ನು ಅವುಗಳ ತಾಯಿಯ ಕೊರಳುಗಳಿಗೆ ನೇಣುಹಾಕಿದರು. ಆದರೆ ಇಸ್ರಾಯೇಲ್ಯರಲ್ಲಿ ಅನೇಕರು ದೃಢವಾಗಿ ನಿಂತರು ಮತ್ತು ಅಶುದ್ಧವಾದ ಆಹಾರವನ್ನು ತಿನ್ನಬಾರದೆಂದು ತಮ್ಮ ಹೃದಯಗಳಲ್ಲಿ ನಿರ್ಣಯಿಸಿ ಕೊಂಡರು. ಆಹಾರದಿಂದ ಹೊಲೆಮಾಡಿಕೊಳ್ಳುವದಕ್ಕಿಂತ ಇಲ್ಲವೇ ಪರಿಶುದ್ಧ ಒಡಂಬಡಿಕೆಯನ್ನು ಅಶುದ್ಧಪಡಿಸುವದಕ್ಕಿಂತ ಸಾಯುವದನ್ನು ಅವರು ಆಯ್ದುಕೊಂಡರು; ಮತ್ತು ಅವರು ಸತ್ತುಹೋದರು. ಮತ್ತು ಮಹಾ ಕೋಪವು ಇಸ್ರಾಯೇಲ್ಯರ ಮೇಲೆ ಬಂದಿತು.[4]

"ದೃಢವಾಗಿ ನಿಂತುಕೊಂಡ" ಯೆಹೂದ್ಯರಲ್ಲಿ ಮಟ್ಟತ್ತಿಯಾಸ ಎಂಬ ಹೆಸರಿನ ಒಬ್ಬ

ಯಾಜಕನಿದ್ದನು. ಅವನು ಮತ್ತು ಅವನ ಐದು ಜನ ಗಂಡು ಮಕ್ಕಳು ಅಂತಿಯೋಕಸ್ ಎಪಿಫಾನೆಸ್‌ನ ಆಜ್ಞೆಗಳನ್ನು ಹಾಗೂ ಬೆಟ್ಟಗಳಿಗೆ ಓಡಿ ಹೋಗಲು ಒತ್ತಾಯಿಸಲ್ಪಟ್ಟರು. ಬೇಗನೇ, ಎಲ್ಲಾ ಕಡೆಗಳಿಂದ ಜನರು ಅವರೊಂದಿಗೆ ಸೇರಲು ಬಂದರು. ಹಾಗೂ ಸಿರಿಯನ್ನರೊಂದಿಗೆ ಯುದ್ಧ ಮಾಡಲು ಸಿದ್ಧರಾದರು. ಕ್ರಿ.ಪೂ. 167ರಲ್ಲಿ ಮಟ್ಟತ್ತಿಯನು ಮರಣ ಹೊಂದಿದಾಗ, ಅವನ ಮಗ ಜೂಡಾಸ ಮಕ್ಕಬ್ಬಿಯನು ದಂಗೆಯ ನಾಯಕನಾದನು. ಅವನ ನಾಯಕತ್ವದಲ್ಲಿ ಯೆಹೂದ್ಯರು, ಪ್ರಾರಂಭಿಕ ಕೆಲವು ಹಿಂಜರಿತಗಳನ್ನು ಜಯಿಸಿದರು ಸಿರಿಯನ್ನರನ್ನು ಹಿಮ್ಮೆಟ್ಟಿಸಿದರು, ತಮ್ಮ ದೇಶವನ್ನು ದೇವಾಲಯವನ್ನು ಹಿಂದಕ್ಕೆ ಪಡೆದರು. ಸಿರಿಯನ್ನರನ್ನು ಅಂತಿಮವಾಗಿ ಯೆರೂಸಲೇಮಿನಿಂದ ಹೊರಗೆ ಹಾಕುವಲ್ಲಿ ಕ್ರಮೇಣವಾಗಿ ಯಶಸ್ವಿಯಾದಾಗ, ಅವರು ಮಾಡಿದ ಮೊದಲನೆಯ ಕಾರ್ಯವು ಅಂತಿಯೋಕಸ್ ಎಪಿಫಾನೆಸನಿಂದ ಹೊಲೆಮಾಡಿದ ದೇವಾಲಯವನ್ನು ಶುದ್ಧೀಕರಿಸುವದಾಗಿತ್ತು. "ಜೂಡಾಸ ಮತ್ತು ಅವನ ಸಹೋದರರು, ಇಗೋ, ನಮ್ಮ ವೈರಿಗಳು ಜಜ್ಜಲ್ಪಟ್ಟಿದ್ದಾರೆ; ಪರಿಶುದ್ಧ ಸ್ಥಳವನ್ನು ಶುದ್ಧೀಕರಿಸಲು ಹೋಗೋಣ ಮತ್ತು ಅದನ್ನು ಪುನಃ ಪ್ರತಿಷ್ಠೆಯು ಮುಕ್ತಾಯಗೊಂಡಾಗ, ಜೂಡಾಸನು ಮತ್ತು ಅವನ ಸಹೋದರರು ಪ್ರತೀವರ್ಷ ಜನರು ಎಂಟು ದಿನಗಳವರೆಗೆ ದೇವಾಲಯದ ಪ್ರತಿಷ್ಠೆಯ ಆಚರಣೆಯನ್ನು ಮಾಡಬೇಕೆಂದು ತೀರ್ಮಾನಿಸಿದರು."[5] ಈ ಪ್ರತಿಷ್ಠೆಯ ಹಬ್ಬವು ಇಸ್ರಾಯೇಲ್ಯರಿಗೆ ತಮ್ಮ ವಿಮೋಚನೆಯನ್ನು ಆಚರಿಸುವ ಹಾಗೂ ದೇವಾಲಯ ಮತ್ತು ಯಜ್ಞವೇದಿಯು ದೇವರಿಗೆ ಪುನಃ ಪ್ರತಿಷ್ಠೆಸಿದ್ದನ್ನು ಜ್ಞಾಪಿಸಿಕೊಳ್ಳುವ ಆಚರಣೆಯ ಸಮಯವಾಯಿತು. ಇಂದು ಈ ಆಚರಣೆಯು ಯೆಹೂದಿ ಜನರಿಗೆ ಹನುಕ್ಕಾ ಎಂದು ತಿಳಿಯಲ್ಪಟ್ಟಿದೆ.

ಮೊದಲನೆಯ ಪ್ರತಿಷ್ಠೆಯ ಹಬ್ಬದ ನಂತರ ಸುಮಾರು ಎರಡನೂರು ವರ್ಷಗಳ ನಂತರ, ಯೇಸುವು ಯೆರೂಸಲೇಮಿನಲ್ಲಿಯ ದೇವಾಲಯಕ್ಕೆ ಈ ಆಚರಣೆಗಾಗಿ ಬಂದನು. ಆ ಸಂದರ್ಭದಲ್ಲಿ ಆತನು ತಾನು ಯಾರಾಗಿದ್ದೇನೆ ಮತ್ತು ತಾನು ಯಾಕೆ ಬಂದಿದ್ದೇನೆ ಎಂಬುದರ ಬಗ್ಗೆ ಧೈರ್ಯದಿಂದ ಮಾತಾಡಿದನು. ಯೋಹಾನ 10ರ ಮೊದಲನೆಯ ಭಾಗದಲ್ಲಿ ನಿಜವಾಗಿದ್ದಂತೆ, ಯೇಸುವು ಹೆಚ್ಚಾಗಿ ಮಾತಾಡಿದಂತೆ, ಪರಿಸ್ಥಿತಿಯು ಹೆಚ್ಚು ಉದ್ವೇಗಕ್ಕೆ ಒಳಗಾಯಿತು. ಆತನು ತನ್ನ ಕೇಳುಗರಿಗೆ ತನ್ನ ಬಗ್ಗೆ ತೀರ್ಮಾನ ಮಾಡಲು ಒತ್ತಾಯಿಸುವದನ್ನು ಮುಂದುವರಿಸಿದನು. ಕೆಲವರು ಆತನಲ್ಲಿ ನಂಬಿಕೆಯಿಟ್ಟರು, ಇತರರು - ಪ್ರಾಥಮಿಕವಾಗಿ ಯೆಹೂದಿ ನಾಯಕರು - ನಂಬಲಿಲ್ಲ, ಆದರೆ ಆತನು ಮಾತಾಡಿದ ಪ್ರತಿಯೊಂದು ಪದಕ್ಕೆ ಹೆಚ್ಚೆಚ್ಚು ಕೋಪವುಳ್ಳವರಾದರು. ಈ ಪಠ್ಯದಲ್ಲಿ, 10:22-42ರಲ್ಲಿ ದಾಖಲೆಯಾದ ಪ್ರತಿಭಟನೆಗಳಲ್ಲಿ, ಯೋಹಾನನು ಯೇಸುವಿನ ವಿರೋಧಿಗಳಿಂದ ತೆಗೆದುಕೊಳ್ಳಲ್ಪಟ್ಟ ಮೂರು ಭಯಪಡಿಸುವ ಕೃತ್ಯಗಳನ್ನು ಮತ್ತು ಅವುಗಳಿಗೆ ಆತನ ಉತ್ತರಗಳನ್ನು ಕೂಡಿಸಿದ್ದಾನೆ.

## ಅವರು ಆತನನ್ನು ಸುತ್ತಿಕೊಂಡರು (10:22-30)

ಯೇಸುವು ದೇವಾಲಯದ ಸೊಲೊಮೋನನ ಮಂಟಪದಲ್ಲಿ ತಿರುಗಾಡುತ್ತಾ ಇರುವಾಗ, "ಯೆಹೂದ್ಯರು ಆತನನ್ನು ಸುತ್ತಿಕೊಂಡಿದ್ದರು" (10:24). ಬಹುಶಃ ಈ ಹಂತದಲ್ಲಿ ಹೆಚ್ಚು ಉತ್ತಮವಾದ ಭಾಷಾಂತರವು "ಯೆಹೂದ್ಯರು ಆತನನ್ನು ಸುತ್ತುವರಿದರು" ಎಂದಿರುವುದು. "ಸುತ್ತಲೂ ಕೂಡಿದರು" ಎಂಬುದಾಗಿ ಉಪಯೋಗಿಸಲ್ಪಟ್ಟ ಗ್ರೀಕ್ ಪದವು ಹೊಸ ಒಡಂಬಡಿಕೆಯಲ್ಲಿ ಕೇವಲ ನಾಲ್ಕು ಸಲ ಕಂಡು ಬರುತ್ತದೆ.[6] ಅವುಗಳಲ್ಲಿ ಎರಡು ಸಂದರ್ಭಗಳಲ್ಲಿ ಅದು ಗೋಡೆಗಳುಳ್ಳ ಪಟ್ಟಣವನ್ನು ಸುತ್ತುವರಿಯುವ ಮತ್ತು ಸ್ವಾಧೀನಪಡಿಸಿಕೊಳ್ಳುವ ವಿಧಾನದಲ್ಲಿ ಸೈನ್ಯವು ದಾಳಿ ಮಾಡುವದನ್ನು ವಿವರಿಸಲು ಉಪಯೋಗಿಸಲ್ಪಟ್ಟಿದೆ. ಯೇಸುವಿನ ಯೆಹೂದಿ ವಿರೋಧಿಗಳು ಆತನ ಎಲುಬುಗಳಿಂದ ಮಾಂಸವನ್ನು

ಕಿತ್ತುಕೊಳ್ಳಲು ಯೋಚಿಸುತ್ತಿರುವ ರಣ ಹದ್ದುಗಳಂತೆ ಆತನನ್ನು ಸುತ್ತುವರಿದಿರುತ್ತಾರೆ: ಇದು ಸ್ನೇಹಿತರ ಆನಂದಕರವಾದ ಕೂಡಿಬರುವಿಕೆಯಾಗಿರಲಿಲ್ಲ; ಆತನ ಅತೀ ದುಷ್ಟವೈರಿಗಳ ಒಂದು ಭಯಪಡಿಸುವ ಕೂಟವಾಗಿತ್ತು!

ನಂಬದೇ ಇದ್ದ ಯೆಹೂದಿ ನಾಯಕರು ತಾನು ಕ್ರಿಸ್ತನಾಗಿರುವನೋ ಇಲ್ಲವೋ ಎಂಬುದನ್ನು ಯೇಸುವು ಹೇಳಬೇಕೆಂದು ಒತ್ತಾಯ ಮಾಡಿದರು. ಅವರು ಆತನನ್ನು ಸುತ್ತುವರಿದರು ಮತ್ತು "ಇನ್ನು ಎಷ್ಟುಕಾಲ ನಮ್ಮಲ್ಲಿ ಅನುಮಾನ ಹುಟ್ಟಿಸುತ್ತೀ? ನೀನು ಕ್ರಿಸ್ತನಾಗಿದ್ದರೆ ಅದನ್ನು ನಮಗೆ ಸ್ಪಷ್ಟವಾಗಿ ಹೇಳು" (10:24) ಎಂದು ಕೇಳುತ್ತಲೇ ಇದ್ದರು.[7] ಯೇಸುವಿನ ಹಾಗೂ ಆತನನ್ನು ನಾಶಪಡಿಸಲು ಬಯಸುತ್ತಿರುವವರ ಮಧ್ಯದಲ್ಲಿ ಮಾನಸಿಕ ಉದ್ವೇಗವು ಬೆಳೆಯುತ್ತಲೇ ಮುಂದುವರಿಯಿತು.

ಮೊದಲ ನೋಟದಲ್ಲಿ ಅವರ ಪ್ರಶ್ನೆಯು ಯೇಸುವು ನೇರವಾಗಿ ಉತ್ತರ ಕೊಡ ಬಹುದಾದದ್ದಾಗಿರುವಂತೆ ತೋರಿತು. ಹೀಗಿದ್ದರೂ, ಕೆಲವು ಪ್ರಶ್ನೆಗಳು ಸರಳವಾದ "ಹೌದು" ಇಲ್ಲವೇ "ಇಲ್ಲ" ಎಂಬುದರಿಂದ ಉತ್ತರ ಕೊಡಲ್ಪಡದವುಗಳಾಗಿರುತ್ತವೆ. ಅವರ ಪ್ರಶ್ನೆಯು "ನೀನು ಸುಳ್ಳಾಡುವದನ್ನು ನಿಲ್ಲಿಸಿದ್ದೀಯೋ?" ಎಂದು ಯಾರಾದರೂ ಕೇಳುವಂತಿತ್ತು. "ಹೌದು" ಎಂದು ನೀನು ಉತ್ತರ ಕೊಟ್ಟರೆ, ನೀನು ಮೊದಲು ಸುಳ್ಳು ಹೇಳುತ್ತಿದ್ದಿ ಎಂದಾಗುತ್ತದೆ. "ಇಲ್ಲ" ಎಂದು ಉತ್ತರ ಕೊಟ್ಟರೆ, ನೀನು ಸುಳ್ಳು ಹೇಳುವದನ್ನು ಮುಂದುವರಿಸುತ್ತೀ ಎಂಬಂತೆ ತೋರುತ್ತದೆ. ಅಂಥ ಪ್ರಶ್ನೆಗೆ ಕೇವಲ "ಹೌದು" ಇಲ್ಲವೇ "ಇಲ್ಲ" ಎಂಬುದಕ್ಕಿಂತ, ಪೂರ್ಣ ವಿವರಣೆಯಿಂದ ಉತ್ತರ ಕೊಡತಕ್ಕದ್ದು. ಯೇಸುವಿನ ದಿನದಲ್ಲಿ ಜನರಿಗೆ "ಕ್ರಿಸ್ತನು" ಏನಾಗಿರುವನೆಂಬುದರ ಬಗ್ಗೆ ಭಿನ್ನವಾದ ತಿಳುವಳಿಕೆಯಿತ್ತು. ಯೇಸುವು, "ಹೌದು, ನಾನು ಕ್ರಿಸ್ತನಾಗಿದ್ದೇನೆ" ಎಂದು ಹೇಳಿದ್ದರೆ, "ಕ್ರಿಸ್ತನು" ದಾವೀದನಂತೆ ಇಲ್ಲವೇ ಸೊಲೊಮೋನನಂತೆ ಬಲವುಳ್ಳ, ಭೂಲೋಕದ ಅರಸನಂತೆ ನಿರೀಕ್ಷಿಸಿದ ಜನರಿಂದ ಆತನು ಭಯಂಕರವಾಗಿ ತಪ್ಪಾಗಿ ತಿಳಿದುಕೊಳ್ಳಲ್ಪಡುತ್ತಿದ್ದನು. ಆತನು "ಇಲ್ಲ" ಎಂದು ಹೇಳಿದ್ದರೆ, ಆಗ ಆತನು ತನ್ನ ಬಗ್ಗೆ ಸತ್ಯವನ್ನು ಅಲ್ಲಗಳೆಯುತ್ತಿದ್ದನು. ಅಂಥ ಸಮಸ್ಯೆಯೊಂದಿಗೆ, ಯೇಸುವು, ತನಗೆ ವಿರುದ್ಧ ವಾಗಿ ತನ್ನ ವೈರಿಗಳಿಗೆ ಉಪಯೋಗಿಸಲು ಏನನ್ನೂ ಕೊಡದೇ ಯಥಾರ್ಥವಾಗಿ ದೇವರನ್ನು - ಹುಡುಕುವವರು ಅರ್ಥಮಾಡಿಕೊಳ್ಳುವಂಥ ಹೇಳಿಕೆಯೊಂದಿಗೆ ಉತ್ತರ ಕೊಟ್ಟನು. ಕುರುಬ ಮತ್ತು ಅವನ ಕುರಿಗಳ ರೂಪಕವನ್ನು ಉಪಯೋಗಿಸಿ, ಮೊದಲು ಯೋಹಾನ 10ರಲ್ಲಿ ಆತನು ಹೇಳಿದಂತೆ, "ನನ್ನ ಕುರಿಗಳು ನನ್ನ ಸ್ವರಕ್ಕೆ ಕಿವಿಗೊಡುತ್ತವೆ; ನಾನು ಅವುಗಳನ್ನು ಬಲ್ಲೆನು; ಅವು ನನ್ನ ಹಿಂದೆ ಬರುತ್ತವೆ" ಎಂದು ಯೇಸು ಹೇಳಿದನು (10:27).

ಬೇರೆ ಕಡೆಯಲ್ಲಿ ಯೇಸುವು, ಜನರು ನಿಜವಾಗಿಯೂ "ಬೇಡಿಕೊಂಡರೆ, ಹುಡುಕಿದರೆ ಮತ್ತು ತಟ್ಟಿದರೆ" ಅವರು, "ಪಡೆದುಕೊಳ್ಳುವರು, ಕಂಡುಕೊಳ್ಳುವರು ಮತ್ತು ನಂಬಿಕೆಗೆ ಬಾಗಲವು ತೆರೆಯಲ್ಪಡುವುದು" ಎಂದು ಹೇಳಿದನು (ಮತ್ತಾಯ 7:7, 8). ನಂಬಿಕೆಯು ಬುದ್ಧಿವಂತಿಕೆಯನ್ನು ಒಳಗೊಂಡಿರುತ್ತದೆ, ಆದರೆ ಅದು ಬುದ್ಧಿವಂತಿಕೆಗಿಂತ ಹೆಚ್ಚಿನದನ್ನು ಒಳಗೊಂಡಿರುತ್ತದೆ: ತೆರೆಯಲ್ಪಟ್ಟ ಹೃದಯ ಮತ್ತು ಸಿದ್ಧವಾದ ವಿಧೇಯ ತೆಗಳು ನಂಬಿಕೆ ಅನಂತರ ಬೀಕಿಸುತ್ತಿದ್ದ, ಕೋಪಗೊಂಡ ಯೆಹೂದಿ ನಾಯಕರಿಂದ ಸುತ್ತುವರಿಯಲ್ಪಟ್ಟಿರುವಾಗ ಯೇಸುವು ಅವರನ್ನು ಇನ್ನೂ ಹೆಚ್ಚು ಕೋಪಿತರನ್ನಾಗಿ ಮಾಡುವಂತೆ ಕೆಲವೊಂದನ್ನು ಹೇಳಿದನು.

"ನಾನು ತಂದೆಯೂ ಒಂದಾಗಿದ್ದೇನೆ" ಎಂದು ಆತನು ಹೇಳಿದನು (10:30). ಎಂಬುದು ಈ ವಚನದಲ್ಲಿ ಅಕ್ಷರಶಃವಾಗಿ "ಒಂದೇ ಸಂಗತಿ"[8] ಎಂದಾಗುತ್ತದೆ. ಯೇಸುವು ಮತ್ತು ತಂದೆಯು ಒಂದು ಐಕ್ಯತೆ ಎಂಬುದನ್ನು ತೋರಿಸುತ್ತದೆ. ಯೇಸುವು ತಾನು ನಿಜವಾಗಿಯೂ ದೇವರ ಕುಮಾರನಾಗಿದ್ದೇನೆಂದು ಹೇಳುತ್ತ ಪುನಃ ತನ್ನ ದೈವತ್ವದ ಬಗ್ಗೆ ಧೈರ್ಯದ ಹೇಳಿಕೆ ಕೊಡುತ್ತಿದ್ದಾನೆ. ಆತನು ವೈರಿಗಳಿಂದ ಸುತ್ತುವರಿಯಲ್ಪಟ್ಟಿದ್ದರೂ,

ಯೇಸುವು ತನ್ನ ಗುರುತಿಸುವಿಕೆಯ ಬಗ್ಗೆ ಮಹತ್ವದ ಸತ್ಯವನ್ನು ಹಿಂದೆಗೆದು ಕೊಳ್ಳುವದನ್ನು ನಿರಾಕರಿಸಿದನು.

## ಅವರು ಕಲ್ಲುಗಳನ್ನು ತೆಗೆದುಕೊಂಡರು (10:31-38)

ತಾನು ಮತ್ತು ತಂದೆಯು ಒಂದಾಗಿದ್ದೇವೆ ಎಂಬ ಯೇಸುವಿನ ಹೇಳಿಕೆಯು ಯೆಹೂದಿ ನಾಯಕರು ಸಹಿಸಲಾರದಷ್ಟಾಗಿತ್ತು. ಅವರು ಕಲ್ಲುಗಳನ್ನು ತೆಗೆದು ಕೊಳ್ಳಲು ಪ್ರಾರಂಭಿಸಿದರು (10:31) ಯಾಕಂದರೆ! ದೇವಾಲಯದ ಎದುರಿನಲ್ಲಿಯೇ ಆತನನ್ನು ಕೊಲ್ಲುವಷ್ಟು ಕೋಪ ಭರಿತರಾಗಿದ್ದರು. ಯೇಸುವಿನ ಮಾತುಗಳು ದೇವಧೂಷಣೆಯನ್ನು ಒಳಗೊಂಡಿರುವವೆಂದು ನಿಶ್ಚಯ ಹೊಂದಿದವರಾಗಿ ತಾವು ಮಾತಾಡುತ್ತಿರುವದಲ್ಲಿ ತಾನು ನ್ಯಾಯವಂತರಾಗಿದ್ದೇವೆಂದು ನಂಬಿದರು, ತನ್ನನ್ನು ದೂರುತ್ತಿದ್ದವರ ಕೈಗಳಲ್ಲಿ ಕಲ್ಲುಗಳಿದ್ದರೂ, ಯೇಸುವು ತಾನು ದೇವರ ಕುಮಾರನು ಆಗಿರುವೆನೆಂದು ತನ್ನ ಹೇಳಿಕೆಯ ಸತ್ಯವನ್ನು ಸ್ಥಾಪಿಸಲಿಕ್ಕೆ ಮುಂದುವರಿದನು.

ಹೋರಾಟವು ಮುಂದುವರಿದಂತೆ ಯೇಸುವು, ತನ್ನ ವಿರೋಧಿಗಳಿಗೆ, "ತಂದೆಯ ಕಡೆಯಿಂದ ಅನೇಕ ಒಳ್ಳೇ ಕ್ರಿಯೆಗಳನ್ನು ನಿಮಗೆ ತೋರಿಸಿದೆನು; ಅವುಗಳಲ್ಲಿ ಯಾವ ಕ್ರಿಯೆಯ ದೆಸೆಯಿಂದ ನನ್ನ ಮೇಲೆ ಕಲ್ಲೆಸೆಯುತ್ತೀರಿ?" (10:32) ಎಂದು ಹೇಳಿದನು. ಅದಕ್ಕೆ ಅವರು ಆತನ ಕಾರ್ಯಗಳಿಗಾಗಿ ಅಲ್ಲ, ಆದರೆ ಆತನು ದೇವದೂಷಣೆ ಮಾಡಿದ್ದಕ್ಕಾಗಿ ಆತನನ್ನು ಕೊಲ್ಲುವೆವು ಎಂದು ಉತ್ತರ ಕೊಟ್ಟರು. ಕೊನೆಯ ಪಕ್ಷ ಯೆಹೂದಿ ನಾಯಕ ರಾದರೂ ಯೇಸುವು ಹೇಳುತ್ತಿದ್ದರ ಪರಿಣಾಮವನ್ನು ಅರ್ಥಮಾಡಿಕೊಂಡರು. "... ನೀನು ಮನುಷ್ಯನಾಗಿದ್ದು ನಿನ್ನನ್ನು ನೀನೇ ದೇವರನ್ನು ಮಾಡಿಕೊಳ್ಳುತ್ತಿರುವಿ" (10:33) ಎಂದು ಅವರು ಹೇಳಿದರು. ಯೇಸುವು ಕೇವಲ ಒಬ್ಬ ಮನುಷ್ಯನಾಗಿದ್ದರೆ, ಆಗ ಅವರು ಹೇಳುತ್ತಿ ದದ್ದು ಸತ್ಯವಾಗುತ್ತಿತ್ತು. ಹೀಗಿದ್ದರೂ, ದೇವರ ಕುಮಾರನಂತೆ, ಆತನಿಗೆ ಈ ಹೇಳಿಕೆಗಳನ್ನು ಕೊಡಲು ಪ್ರತಿಯೊಂದು ಹಕ್ಕು ಮತ್ತು ಕಾರಣವು ಇತ್ತು.

ಯೇಸುವು ತನ್ನ ವಿರೋಧಿಗಳನ್ನು ಕೀರ್ತನೆ 82:6ರ ಮಾತುಗಳಿಂದ ಆಹ್ವಾನಿ ಸುವದರಿಂದ ಎದುರಿಸಿದನು. ಅಲ್ಲಿ ಕೀರ್ತನೆಗಾರನು, "ನೀನು ದೇವರುಗಳು ... ಎಂದು ನಾನು ಹೇಳಿದೆನು" ಎಂದು ಬರೆದಿದ್ದಾನೆ. ಹಿಂದಿನ ಕಾಲದಲ್ಲಿ ಇದ್ದವರ ಬಗ್ಗೆ ಪರಿಶುದ್ಧ ಬರಹಗಳು ಇದನ್ನು ಹೇಳಿದ್ದರೆ, ಆಗ ಅದೇ ಭಾಷೆಯನ್ನು ಉಪಯೋಗಿಸಿದ್ದಕ್ಕಾಗಿ ಆತನ ಬಗ್ಗೆ ತಪ್ಪುಹೊರಿಸಬಾರದೆಂದು ಆತನು ವಾದಿಸಿದನು. ಎಲ್ಲಕ್ಕಿಂತ ಹೆಚ್ಚಾಗಿ, ಆತನು "ತಂದೆಯು ಪ್ರತಿಷ್ಠೆ ಮಾಡಿ ಲೋಕಕ್ಕೆ ಕಳುಹಿಸಲ್ಪಟ್ಟಾತನಾಗಿದ್ದನು" (10:36).

ಯೇಸುವು ತನ್ನ ಬಗೆಗಿನ ಸತ್ಯದ ತನ್ನ ಘೋಷಣೆಯಲ್ಲಿ ನಿಷ್ಠುರನಾಗಿದ್ದವನಂತೆ ಯೋಹಾನನು ಪ್ರಸ್ತುತ ಪಡಿಸಿದ್ದಾನೆ. ಆದರೇ ಜನರು ಉಗ್ರವಾದ ಅವರ ಕೈಗಳಲ್ಲಿ ಕಲ್ಲುಗಳು ಇನ್ನೂ ಇದ್ದಾಗ, ಯೇಸುವು ತನ್ನ ಅಂಶವನ್ನು ಒತ್ತಿ ಹೇಳುವದನ್ನು ಮುಂದುವರಿಸಿದನು. ಆತನು ಅವರಿಗೆ ತನ್ನ ಕಾರ್ಯಗಳನ್ನು ನೋಡಬೇಕೆಂದು ಮತ್ತು ಅವು ತಂದೆಯ ಕಾರ್ಯಗಳಾಗಿರುವವೋ ಇಲ್ಲವೋ ಎಂಬುದನ್ನು ನೋಡಬೇಕೆಂದು ಹೇಳಿದನು. ಆತನು ತಂದೆಯ ಕಾರ್ಯಗಳನ್ನು ಮಾಡುತ್ತಿರುವದರಿಂದ, "ತಂದೆಯು ನನ್ನಲ್ಲಿದ್ದಾನೆ, ನಾನು ತಂದೆ ಯಲ್ಲಿದ್ದೇನೆ" (10:38) ಎಂದು ಆತನು ಹೇಳಿದಾಗ ಅವರು ಆತನನ್ನು ನಂಬಬೇಕಾಗಿತ್ತು. ಆ ದಿನದಲ್ಲಿ ದೇವಾಲಯದ ಬಳಿಯಲ್ಲಿ ನಿಂತಿರುವ ಪ್ರತಿಯೊಬ್ಬನಿಗೆ ಇದೆಲ್ಲದರ ಅರ್ಥವು ಸ್ಪಷ್ಟವಾಗಿತ್ತು. ಯೇಸುವು ಪುನಃ ದೇವರ ಕುಮಾರನಾಗಿದ್ದೇನೆಂದು ಹೇಳುತ್ತಿದ್ದನು! ಜನರ ಗುಂಪಿನಿಂದ ಕಲ್ಲೆಸೆಯಲ್ಪಡುವ ಭಯವೂ ಸಹ ತನ್ನ ಬಗ್ಗೆ ಸತ್ಯವನ್ನು ಪ್ರಸಂಗಿಸುವದರಿಂದ ಆತನನ್ನು ದೂರವಿಡಲಾರದಾಗಿತ್ತು.

## ಅವರು ತಿರುಗಿ ಆತನನ್ನು ಹಿಡಿಯುವದಕ್ಕೆ ನೋಡಿದರು (10:39-42)

ಯೇಸುವಿನ ವಿರೋಧಿಗಳು ಆತನನ್ನು ಹಿಡಿಯುವದಕ್ಕೆ ಪ್ರಯತ್ನಿಸಿದರು. ಆದರೆ ಆತನು ತಪ್ಪಿಸಿಕೊಂಡನು ಮತ್ತು ಯೆಹೂದಿ ನಾಯಕರೊಂದಿಗೆ ಇನ್ನೊಂದು ಪಂದ್ಯದಲ್ಲಿ ಕಂಡು ಕೊಂಡನು. ಯೇಸುವು ತಾನು ತನ್ನ ಪ್ರಾಣವನ್ನು ತನ್ನ ಸ್ವಂತ ಸಮಯದಲ್ಲಿ ಕೊಡುವೆನು, ಆದರೆ ವಿರೋಧಿಗಳು ತನ್ನಿಂದ ಅದನ್ನು ಎಳೆದು ಕೊಳ್ಳುವೆವೆಂದು ಯೋಚಿಸಿದಾಗ ಅಲ್ಲ ಎಂಬುದನ್ನು ಪ್ರದರ್ಶಿಸುವದನ್ನು ಮುಂದುವರಿಸಿದನು (10:17, 18). ಯೇಸುವು ಅದನ್ನು ಹೇಗೆ ಆತನು "ಅವರ ಕೈಗೆ ತಪ್ಪಿಸಿಕೊಂಡು ಹೋದನು" (10:39).

ದೇವಾಲಯದಲ್ಲಿಯ ಎದುರಿಸುವಿಕೆಯ ನಂತರ, ಯೇಸುವು ಯೊರ್ದನ್ ಹೊಳೆಯ ಆಚೆ ಯೋಹಾನನು ಮೊದಲು ಸ್ನಾನಮಾಡಿಸುತ್ತಿದ್ದ ಸ್ಥಳಕ್ಕೆ ತಿರುಗಿ ಹೋಗಿ ಅಲ್ಲಿದ್ದನು. ಈ ಹಂತದಲ್ಲಿ, ಯೆರೂಸಲೇಮಿನಲ್ಲಿ ಯೇಸುವಿನ ಬಹಿರಂಗ ಸೇವೆಯ ಹೆಚ್ಚಾದ ಭಾಗವು ಮುಗಿಯಿತು. ಆತನ ಹೇಳಿಕೆಗಳು ಮುಂದಿಡಲ್ಪಟ್ಟಿದ್ದವು ಮತ್ತು ಯುದ್ಧದ ಗೆರೆಗಳು ಎಳೆ ಯಲ್ಪಟ್ಟಿದ್ದವು. ಜನರು ಯೆಸುವಿನ ಬಗ್ಗೆ ಆಳವಾಗಿ ವಿಭಾಗಿಸಲ್ಪಟ್ಟಿದ್ದವು. ಕೆಲವರಿಗೆ ಆತನು ದೇವರ ಕುಮಾರನು ಆಗಿದ್ದನು, ಮತ್ತು ಇತರರಿಗೆ ಆತನು ನರಕದಿಂದ ಬಂದ ಪಿಶಾಚನಂತೆ ತೋರಿದನು.

ಯೊರ್ದನಿಗೆ ಅನೇಕ ಜನರು ಆತನ ಬಳಿಗೆ ಬಂದರು. ಇದು ಅವರ ಪರವಾಗಿ ನಂಬಿಕೆಯ ಕೃತ್ಯವಾಗಿತ್ತು. "ಯೋಹಾನನು ಒಂದು ಸೂಚಕ ಕಾರ್ಯವನ್ನು ಮಾಡಲಿಲ್ಲ; ಆದರೆ ಈತನ ವಿಷಯವಾಗಿ ಯೋಹಾನನು ಹೇಳಿದೆಲ್ಲಾ ನಿಜವಾಗಿತ್ತು" (10:41) ಎಂದು ಅವರು ಹೇಳಿ ದರು. ಅವರ ಮಾತುಗಳು ಯೋಹಾನನು ಯಾವುದೇ ಸೂಚಕ ಕಾರ್ಯವನ್ನೂ ಮಾಡಲಿಲ್ಲ, ಆದರೆ ಯೇಸುವು ಅನೇಕ ಸೂಚಕ ಕಾರ್ಯಗಳನ್ನು ಮಾಡಿದನು. ಎಂಬುದನ್ನು ತೋರಿಸಿದವು. ಅರ್ಥಗರ್ಭಿತವಾಗಿ, "ಸೂಚಕ ಕಾರ್ಯಕ್ಕೆ" ಯೋಹಾನನು ಉಪಯೋಗಿಸಿದ ವಿಶೇಷವಾದ ಪದವು 10ನೆಯ ಅಧ್ಯಾಯದಲ್ಲಿ ಪ್ರಥಮ ಸಲಕ್ಕೆ ವಚನ 41ರಲ್ಲಿ ಕಂಡು ಬರುತ್ತದೆ. ಈ ಅಧ್ಯಾಯದಲ್ಲಿ ಮೊದಲು, ಯೇಸುವಿನ ಅದ್ಭುತ ಕಾರ್ಯಗಳು ಕೇವಲ "ಕ್ರಿಯೆಗಳು" ಎಂದು ಕರೆಯಲ್ಪಟ್ಟವು[9] ಯಾಕಂದರೆ ಅವುಗಳನ್ನು ನೋಡಿದವರ ಹೃದಯದಲ್ಲಿ ಅವು ನಂಬಿಕೆಯನ್ನು ಹುಟ್ಟಿಸಿರಲಿಲ್ಲ. ಹೀಗಿದ್ದರೂ, ಯೇಸುವಿನಲ್ಲಿ ನಂಬಿಕೆಯು ವಿವರಿಸಲ್ಪಟ್ಟ ವಚನ 41ರಲ್ಲಿ, "ಸೂಚಕ ಕಾರ್ಯ" ಎಂಬುದು ಕಂಡು ಬರುತ್ತದೆ.

10ನೆಯ ಅಧ್ಯಾಯದಲ್ಲಿಯ ಎಲ್ಲಾ ಘಟನೆಗಳ ತೀರ್ಮಾನವು "ಅನೇಕರು ಆತನನ್ನು ನಂಬಿದರು" (10:42) ಎಂಬುದಾಗಿದೆ. ಐವತ್ತು ವರ್ಷಗಳಿಂದ ಮದುವೆಯಾಗಿದ್ದ ದಂಪತಿಗಳು ತಾವು ಒಂದಾಗಿ ಜೀವಿಸಿದ ಸಮಯವನ್ನು ಹಿಂದಿರುಗಿ ನೋಡಿ, ತಮ್ಮ ಜೀವಿತಗಳಲ್ಲಿ "ನಾನು ನಿನ್ನನ್ನು ಪ್ರೀತಿಸುತ್ತೇನೆ" ಎಂಬ ಮಾತುಗಳನ್ನು ಭಿನ್ನವಾದ ಅರ್ಥಗಳನ್ನು ಜ್ಞಾಪಿಸಿಕೊಳ್ಳುವಂತೆ, ಯೋಹಾನನ ಸುವಾರ್ತೆಯ ವಾಚಕನು "ಅನೇಕರು ನಂಬಿದರು" ಎಂಬುದಕ್ಕೆ ಯೇಸುವಿನ ಕಥೆಯ ಬಹಿರಂಗಪಡಿಸುವಂತೆ ಭಿನ್ನವಾದ ಅರ್ಥಗಳನ್ನು ಗ್ರಹಿಸಿಕೊಳ್ಳುವನು.

ಯೋಹಾನನ ಸುವಾರ್ತೆಯಲ್ಲಿಯ ಈ ಅಂಶದಿಂದ ಯೇಸುವಿನಲ್ಲಿ, ನಂಬಿಕೆಯಿಟ್ಟವರು ನಿಜವಾದ ನಂಬಿಕೆಯ ಅಡಕವು ಯೇಸುವು ಕ್ರಿಸ್ತನಾಗಿದ್ದಾನೆ. ದೇವರ ಕುಮಾರನಾಗಿದ್ದಾನೆ ಎಂಬ ತಿಳುವಳಿಕೆಗೆ ಬರುವರು. ಈ ನಂಬಿಕೆಯ ಬೆಲೆಯು ಹೋರಾಟ, ವಿಭಜನೆ, ಮತ್ತು ಮರಣದ ಭಯಪಡಿಸುವಿಕೆಯೂ ಆಗಬಹುದೆಂಬದನ್ನು ಅವರು ತಿಳಿದಿರುವರು. ಎಲ್ಲಕ್ಕಿಂತ ಹೆಚ್ಚಾಗಿ, ಅಧ್ಯಾಯದ ಅಂತ್ಯದಲ್ಲಿ ಅಡವಿಯಲ್ಲಿ ಹೊರಗೆ ಹಾಕಲ್ಪಟ್ಟ ಒಂದು ಗುಂಪಿನೊಂದಿಗೆ ಅವರನ್ನು ಅವರು ನಂಬಿದಾತನನ್ನು ಹಿಂಬಾಲಿಸುವದನ್ನು ನೋಡುತ್ತೇವೆ.

ಯೋಹಾನನು ನಂಬಿಕೆಯು ಹೇಗೆ ಬಹುಬೆಲೆಯುಳ್ಳದ್ದಾಗಿರುವದೆಂಬದರ ಬಗ್ಗೆ ಕಠಿಣವಾದ ಸಂದೇಶವನ್ನು ಕೊಟ್ಟಿದ್ದರೂ, ಅವನ ಸಂದೇಶವೂ ಅದೇ ಸಮಯದಲ್ಲಿ ಪ್ರೋತ್ಸಾಹದ ಸಂದೇಶವೂ ಆಗಿರುತ್ತದೆ. ಕ್ರಿಸ್ತನಲ್ಲಿ ನಂಬಿಗಸ್ತರಾಗಿರುವದರಿಂದ ನಾವು

ವಿರೋಧಿಸಲ್ಪಡುವೆವು ಎಂಬುದನ್ನು ನಾವು ಅರ್ಥಮಾಡಿ ಕೊಳ್ಳಬೇಕೆಂಬುದನ್ನು ಅವನು ಬಯಸಿದನು. ಹೀಗಿದ್ದರೂ, ವಿರೋಧಿಸುವಿಕೆಯು ನಮ್ಮನ್ನು ಆಶ್ಚರ್ಯಭರಿತರನ್ನಾಗಿ ಮಾಡಬಾರದು ಇಲ್ಲವೇ ನಮ್ಮ ಆತ್ಮಗಳನ್ನು ಜಜ್ಜಬಾರದು. ಇದಲ್ಲದೇ, ಯೇಸುವಿನ ಉದಾಹರಣೆಯು, ನಾವು ಹಿಂಸಿಸಲ್ಪಡುವಾಗಲೂ, ನಾವು ನಂಬುವ ಸತ್ಯದ ಮೇಲೆ ದೃಢವಾಗಿ ನಿಲ್ಲತಕ್ಕದ್ದು. ಬಲವಾದ ವಿರೋಧಿಸುವಿಕೆಗೆ ಆತನ ದೃಢವಾದ ಉತ್ತರವು ಸತ್ಯವನ್ನು ಮಾತಾಡುವದಾಗಿತ್ತು, ಮತ್ತು ನಾವು ಅದನ್ನೇ ಮಾಡತಕ್ಕದ್ದು.

## ಮುಕ್ತಾಯ

ಈ ಸಂಪೂರ್ಣ ಘಟನೆಯು ಪ್ರತಿಷ್ಠೆಯ ಹಬ್ಬದ ಸಮಯದಲ್ಲಿ ನಡೆಯಿತು. ಯೇಸುವು ತನ್ನ ಜನರನ್ನು ದೇವರು ವಿಮೋಚಿಸಿದ್ದನ್ನು ಈ ಹಬ್ಬವಾಗಿ ಆಚರಿಸುವಲ್ಲಿ ಕಾಣಿಸಿಕೊಂಡಾಗ, ಆ ಜನರು ಆತನನ್ನು ಒಬ್ಬ ದುಷ್ಟ ದೇವಧೂಷಕನಂತೆ ನಡಿಸಿಕೊಂಡದ್ದು ಹಾಸ್ಯಾಸ್ಪದವಾದದ್ದಾಗಿದೆ. ಯೆಹೂದಿ ನಾಯಕರು ಆತನನ್ನು ಒಬ್ಬ ಗಂಡಾಂತರಕಾರಿಯಾದ ಮನುಷ್ಯನಂತೆ ಮತ್ತು ಒಬ್ಬ ದುಷ್ಟ ಅಬದ್ಧ ಬೋಧಕನಂತೆ ದೃಷ್ಟಿಸಿದರು. ನಿಜವಾದ ಬಿಡುಗಡೆಯನ್ನು ಒದಗಿಸುವದಕ್ಕಾಗಿ ಬೇಗನೇ ಯೇಸುವು ಶಿಲುಬೆಗೆ ಹೋಗುವನೆಂಬುದನ್ನು ಅವರು ಗ್ರಹಿಸಿಕೊಳ್ಳಲಿಲ್ಲ. ತನ್ನ ಜನರ ಶುದ್ಧೀಕರಣಕ್ಕಾಗಿ - ಪ್ರಾಣಿಗಳ ರಕ್ತವನ್ನಲ್ಲ - ಆದರೆ ತನ್ನ ಸ್ವಂತ ರಕ್ತವನ್ನು ಸುರಿಸುವನೆಂಬುದನ್ನು ಅವರು ತಿಳಿದುಕೊಳ್ಳಲಿಲ್ಲ. ಆ ದಿನದಲ್ಲಿ ಪಾಪ ರಹಿತವಾದ ಮತ್ತು ಕಳಂಕವಿಲ್ಲದ ದೇವರ ಕುರಿಯಾಗಿರುವಾತನು ಎಂಬ ಸಂಗತಿಯನ್ನು ಅವರು ಅರಿತುಕೊಳ್ಳಲಿಲ್ಲ. ಇಂದು, ನಾವು ನಿಂತು ಕೊಂಡಿರುವಲ್ಲಿಂದಲೇ ಈ ಸಂಗತಿಗಳನ್ನು ನೋಡಬಲ್ಲೆವು, ಮತ್ತು ಅವು ಸುವಾರ್ತೆಯ ತಿರುಳು ಎಂದು ಬಲ್ಲೆವು!

---

ಟಿಪ್ಪಣಿಗಳು

[1]1 ಮಕ್ಕಬ್ಬಿ 1:21 ಸುಮಾರು ಕ್ರಿ.ಪೂ. 100ರ ಸುಮಾರಿಗೆ ಬರೆಯಲ್ಪಟ್ಟ ಮಕ್ಕಬ್ಬಿಯರ ಎರಡು ಅಪೊಕ್ರಿಫ ಗ್ರಂಥಗಳು, ಹಳೇ ಮತ್ತು ಹೊಸ ಒಡಂಬಡಿಕೆಗಳ ಮಧ್ಯದ ಅವಧಿಯಲ್ಲಿ ಸಂಭವಿಸಿದ ಐತಿಹಾಸಿಕ ಘಟನೆಗಳ ವಿವರಗಳನ್ನು ಒಳಗೊಂಡಿರುತ್ತವೆ. ಎರಡೂ ಗ್ರಂಥಗಳು ಕ್ರಿ.ಪೂ. 166-40ರಲ್ಲಿ ಪಾಲೆಸ್ತೀನದಲ್ಲಿ ಯೂದಾಯ ಧರ್ಮವನ್ನು ಹತ್ತಿಕ್ಕುವ ಪ್ರಯತ್ನದ ಮೇಲೆ ಮತ್ತು ಸ್ವಾತಂತ್ರಕ್ಕಾಗಿ ಯೆಹೂದ್ಯರ ಹೋರಾಟದ ಮೇಲೆ ಕೇಂದ್ರೀಕರಿಸುತ್ತವೆ. [2]2 ಮಕ್ಕಬ್ಬಿ 1:41. [3]1 ಮಕ್ಕಬ್ಬಿ 1:56. [4]1 ಮಕ್ಕಬ್ಬಿ 1:60-64. [5]1 ಮಕ್ಕಬ್ಬಿ 4:36. [6]ಲೂಕ 21:20; ಯೋಹಾನ 10:24; ಅಪೊಸ್ತಲರ ಕೃತ್ಯಗಳು 14:20; ಇಬ್ರಿಯ 11:30. [7]"ಕೇಳುತ್ತಲೇ ಇದ್ದರು" ಇದು ಇಲ್ಲಿ ಅಪರಿಪೂರ್ಣ ಕ್ರಿಯಾ ಪದ ಕಾಲದ ಅರ್ಥದಲ್ಲಿದೆ. [8]ಲಿಂಗವು ಗ್ರೀಕ್ ನಪುಂಸಕ ಲಿಂಗದಲ್ಲಿದೆ. [9]ಗ್ರೀಕ್ ಎಂಬುದು 10:25, 32, 38ರಲ್ಲಿ ಉಪಯೋಗಿಸಲ್ಪಟ್ಟಿದೆ.